ಮಹಿಳೆ: ಸಾರ್ ಇವತ್ತು ಮಳೆ ಬರುತ್ತದಾ? (ಮೊದಲ ದಿನ)

ಹವಾಮಾನ ಅಧಿಕಾರಿ: ಬಂದರೂ ಬರಬಹುದು. ಗೊತ್ತಿಲ್ಲಾ ತಾಯಿ.

ಮಹಿಳೆ: ಸಾರ್ ಇವತ್ತು ಮೋಡ ಕವಿದಿದೆ. ಮಳೆ ಬರಬಹುದಾ? (ಎರಡನೆಯ ದಿನ)

ಹವಾಮಾನ ಅಧಿಕಾರಿ: ಬರಬಹುದು. ಆದರೆ ಗ್ಯಾರಂಟಿ ಇಲ್ಲ.

ಮಹಿಳೆ: ಸಾರ್ ಇವತ್ತು ಮಳೆ ಬರುವ ಸೂಚನೆ ಏನಾದರೂ ಇದೆಯಾ? (ಮೂರನೆಯ ದಿನ)

ಹವಾಮಾನ ಅಧಿಕಾರಿ: ಏನು ತಾಯಿ ಮೂರು ದಿನದಿಂದ ಮಳೆ ಬರುತ್ತಾ ಅಂತಕೇಳ್ತಾ ಇದೀರಲ್ಲ. ಯಾಕೆ?

ಮಹಿಳೆ: ಏನಿಲ್ಲಾ ಸಾರ್! ನಮ್ಮ ಮನೆ ಟೆರೇಸ್ ಮೇಲೆ ಅರಳು ಸಂಡಿಗೆ ಇಡಬೇಕಾಗಿತ್ತು. ಅದಕ್ಕೇ ಕೇಳ್ದೆ!

***

ಗುಮಾಸ್ತ: ಸಾರ್ ಒಂದು ವಿಷಯ

ಬಾಸ್: ಏನು?

ಗುಮಾಸ್ತ: ಏನಿಲ್ಲಾ ಸಾರ್! ನನಗೆ ವಿಪರೀತ ಸುಸ್ತಾಗಿದೆ. ಎರಡು ದಿನ ರಜೆ ಬೇಕಾಗಿತ್ತು.

ಬಾಸ್: ಯಾಕೆ ನಾನು ಒಂದು ತಿಂಗಳು ರಜೆ ಹೋಗಿದ್ದೆನಲ್ಲ ಅದು ನಿನಗೆ ಸಾಕಾಗಲಿಲ್ಲವಾ?



ಅಮಲಿನಲ್ಲಿದ್ದ ಗುಂಡ: ಲೇ ನಾನೀಗ ಸ್ವರ್ಗದಲ್ಲಿದ್ದೇನೆ.
ಹೆಂಡತಿ: ಅದು ಸಾಧ್ಯವೇ ಇಲ್ಲ.
ಗುಂಡ: ಇಲ್ಲಾ ಕಣೇ ನಾನು ಸ್ವರ್ಗದಲ್ಲೇ ಇದ್ದೇನೆ.
ಹೆಂಡತಿ: ಅದು ಹೇಗೆ ಸಾಧ್ಯಾರೀ ನಾನು ನಿಮ್ಮ ಬಳಿ ಇರುವಾಗ?

***

ಟೀಚರ್: 'ನಿಮ್ಮೊಂದಿಗೆ ಮದುವೆಯಾಗಿ ನನ್ನ ಜನ್ಮ ಸಾರ್ಥಕವಾಯಿತು' ಈ ಮಾತನ್ನು ಯಾರು ಯಾರಿಗೆ ಯಾವಾಗ ಹೇಳಿದರು?

ಗುಂಡ: ಮಿಸ್ ನೆನ್ನೆ ರಾತ್ರಿ ನಮ್ಮಪ್ಪ ಸಿಕ್ಕಾಪಟ್ಟೆ ಕುಡಿದು ಬಂದಾಗ ಅಮ್ಮ ಅವರಿಗೆ ಹೇಳಿದಳು.

***

ಭಿಕ್ಷುಕ: ತಾಯೀ ತುಂಬಾ ಬಾಯಾರಿಕೆ. ಕುಡಿಯಲು ನೀರು ಕೊಡಿ.

ಗೃಹಿಣಿ: ಅಯ್ಯೋ ಇವತ್ತು ನಮ್ಮ ಮನೆಯಲ್ಲಿ ನೀರೇ ಬಂದಿಲ್ಲಾಪ್ಪ.

ಭಿಕ್ಷುಕ: ಹೋಗಲಿ ತಾಯಿ ನೀರು ಮಜ್ಜಿಗೇನೇ ಕೊಡಿ ಸಾಕು.

***

ವೈದ್ಯ: ಏನಯ್ಯಾ ನಿನ್ನ ಹೆಂಡತಿ ಸತ್ತು ಹೋಗಿದ್ದಾಳೇಂತ ಹೇಗೆ ಖಚಿತವಾಗಿ ಹೇಳ್ತಿ?

ಗುಂಡ: ಮತ್ತಿನ್ನೇನು ಡಾಕ್ಟ್ರೇ! ನಾನು ಅವಳನ್ನು ಒದ್ದಾಗ ಅವಳು ಒಂದಿಂಚೂ ಕೂಡಾ ಅಲುಗಾಡಲೇ ಇಲ್ಲ ಅಂತೀನಿ.

***

ತಂದೆ: ನಿನ್ನ ಮಾರ್ಕ್ಸ್ ಕಾರ್ಡ್ ನೋಡುವುದಕ್ಕೆ ನನಗೆ ನಿಜವಾಗಲೂ ಮನಸ್ಸೇ ಇಲ್ಲ ಕಣೋ.

ಮಗ: ನಾನು ನನ್ನ ಟೀಚರ್ ಗೆ ಇದನ್ನೇ ಹೇಳಿದೆ ಅಪ್ಪಾ! ಆದರೂ ಅವರು ನಿನ್ನ ಸಹಿ ಹಾಕಿಸಿಕೊಂಡು ಬರಲೇಬೇಕು ಎಂದರು.

***

ಗೆಳೆಯ: ಮಹಿಳೆಯರನ್ನು ಮಾತೆ ಎಂದು ಕರೆಯುತ್ತಾರಲ್ಲ ಯಾಕೆ?

ಗುಂಡ: ಯಾಕೆಂದರೆ ಅವರಿರುವ ಕಡೆಯೆಲ್ಲ ಮಾತೇ ಹೆಚ್ಚಾಗಿರತ್ತದಲ್ಲ ಅದಕ್ಕೆ.

(ಸಂಗ್ರಹ)
ಎಂ.ಕೆ. ಮಂಜುನಾಥ್

**ಐಪಿಎಲ್ ಗಾದೆಗಳು**

- ಕ್ರಿಕೆಟ್ ಪೆಪ್ಪರ್ ಸಾಲ್ಟ್, ಮುಂಬೈನ ಬುಮ್ರಾ ಬೋಲ್ಟ್!
- ಮಿಂಚಿದ್ದು ಯಾರವ? ಸೂರ್ಯ ಕುಮಾರ್ ಯಾದವ!
- ಕಿಂಗ್ಸ್ ಸೋತ್ರೂ ಫುಲ್, ಗೆದ್ದ ಅಲ್ವಾ ನಮ್ ರಾಹುಲ್!
- ಏನ್ ಮಾಡಿದ್ರೇನ್ ಉತ್ತಪ್ಪ, ನಿನ್ನನ್ನ ಔಟ್ ಮಾಡೊದು ನಮಗೆ ಗೊತ್ತಪ್ಪ!
- ವಿಕೆಟ್ ಹಿಂದೆ ಓಕೆ, ಧೋನಿ ವಿಕೆಟ್ ಮುಂದೆ ತೂಕೇ!
- ಚೆನ್ನಾಗಿ ಆಡಿದ್ದ ಐಯ್ಯರ್ ಅದಕ್ಕೇ ಯಾರೂ ಅವನನ್ನ ಬೈಯ್ಯರ್!
- ಬಿಟ್ಟದ್ದಷ್ಟೇ ಹಲ್ಲು, ಆರ್ ಸಿ ಬಿ ಗೆಲ್ಲಿಸ್ಲಿಲ್ಲ ಚಾಹಲ್ಲು!
- ಚೆನ್ನಾಗಿ ಆಡಿದ್ರೂ ಗೇಲು, ಅವನ ತಂಡ ಅಯ್ತು ಫೇಲು!
- ವಾಟ್ಸನ್ ಬೇಗ tire ಆಗ್ತಿದ್ದ, ಕೊನೆಗೆ ಹೋಗಿ ರಿಟೈರ್ ಆದ!
- ಚೆನ್ನೈ ನಂಬಿಕೊಂಡಿದ್ದರು ರೈನ, ಕೊಟ್ಟು ನಡೆದ ಅವನು ಕೈನ!
- ಚೆನ್ನಾಗಿ ಆಡ್ತಿದ್ದಲ್ಲೋ ದೇವಿದತ್ತ, playoffನಲ್ಲಿ ಸ್ವಲ್ಪ ಹೊಡೀಬಾರ್ದಿತ್ತಾ?
- ನಿರೀಕ್ಷೆಯಂತೆ ಆಡಲಿಲ್ಲ ಡ್ರೆ ರಸ್ಸು, ಅದಕ್ಕೇ ಅವರಿಗೆ playoff ಮಿಸ್ಸು!

(ಸಂಗ್ರಹ) ತಲಕಾಡು ಶ್ರೀನಿಧಿ

ಓಂ + ☾ ಸರ್ವೇಜನಾಃ ಸುಖಿನೋ ಭವಂತುಃ ಓಂ + ☾
ಸಮಸ್ಯೆ ನಿಮ್ಮದು ಪರಿಹಾರ ನಮ್ಮದು

ಶ್ರೀ ಸಾಯಿಬಾಬ ಉಪಾಸಕರು
ದಕ್ಷಿಣ ಭಾರತದಾದ್ಯಂತ ಜನಮನ್ನಣೆ ಪಡೆದಿರುವ ವಂಶಪಾರಂಪರಿಕ
ವಶೀಕರಣ ಮಾಂತ್ರಿಕರು
ಶ್ರೀಯುತ ಪರಶುರಾಮ್ ಗುರೂಜಿ
ಸ್ತ್ರೀ ಪುರುಷ ವಶೀಕರಣ, ಸತಿಪತಿ ಕಲಹ, ಡೈವೋರ್ಸ್ ಪ್ರಾಬ್ಲಮ್, ಸಾಲಬಾಧೆ, ಪ್ರೇಮವಿಚಾರ, ಸಂತಾನಫಲ, ವ್ಯಾಪಾರಾಭಿವೃದ್ಧಿ, ಜಮೀನು ವಿಚಾರ, ಕೋರ್ಟ್‌ಕೇಸ್, ಮಾಟಮಂತ್ರ, ಪ್ರೇತಬಾಧೆ ಇನ್ನಿತರ ನಿಮ್ಮ ಸಮಸ್ಯೆ ಏನೇ ಇರಲಿ ಎಷ್ಟೇ ಕಠಿಣವಾಗಿರಲಿ ಕೇರಳ ಮತ್ತು ಕೊಳ್ಳೇಗಾಲದ 16ನೇ ಶತಮಾನದ ಪ್ರಾಚೀನ ತಾಳೆಗ್ರಂಥದ ರಹಸ್ಯವಾದ ಮಹಾರುದ್ರಶೂಲ ಪ್ರಣವಶಕ್ತಿಯಿಂದ
ಕೇವಲ 5 ದಿನದಲ್ಲಿ 100% ಪರಿಹಾರ ಶತಸಿದ್ಧ
ನೀವು ಎಷ್ಟೋ ದೈವ, ದೇವಸ್ಥಾನ ಮತ್ತು ಜ್ಯೋತಿಷ್ಯರಲ್ಲಿ ಕೇಳಿ ಪರಿಹಾರ ಸಿಗದೆ ನೊಂದಿದ್ದರೆ ಶೀಘ್ರ ಪರಿಹಾರಕ್ಕಾಗಿ ಇವರನ್ನೊಮ್ಮೆ ಭೇಟಿಮಾಡಿ.
ಇಲ್ಲಿ ಹೇಳುವ ವಿಷಯವನ್ನು ಗುಪ್ತವಾಗಿಡಲಾಗುವುದು ಹಾಗೂ ಗುರೂಜಿಯವರಲ್ಲಿ ನಿಸ್ಸಂಕೋಚದಿಂದ ಮಾತನಾಡಲು ಕರೆಮಾಡಿ:
9620444460
ಖಾಯಂ ಮನೆ ವಿಳಾಸ: ಜೈಬಾಲಾಜಿ ಜ್ಯೋತಿಷ್ಯಂ
ಬನಶಂಕರಿ ದೇವಸ್ಥಾನದ ಹತ್ತಿರ, ಮುಖ್ಯಬಸ್‌ನಿಲ್ದಾಣದ ಪಕ್ಕದಲ್ಲಿ, ಬನಶಂಕರಿ ಬೆಂಗಳೂರು.
ವಿಶೇಷ ಸೂಚನೆ: ಈ ಪೇಪರ್ ಕಟ್ಟಿಂಗ್ ತಂದವರಿಗೆ ಮುಜರಾಯಿ ಇಲಾಖೆ ಮತ್ತು ಧಾರ್ಮಿಕ ದತ್ತಿ ಇಲಾಖೆ ಹಾಗೂ ಮಾಡಾಯಿಕಾವ್ ಭಗವತಿ ದೇವಸ್ಥಾನಂ (ತಳಿಪರಂ) ಕೇರಳ ವತಿಯಿಂದ ಉಚಿತ ಸೇವೆಗಳು ಮತ್ತು ಪರಿಹಾರಗಳು ಲಭ್ಯವಿದೆ.